ಚಿತ್ರದುರ್ಗ ಜಿಲ್ಲೆ

1) ಹೊಸದುರ್ಗ ತಾಲ್ಲೂಕು ದೊಡ್ಡಗಟ್ಟಿ ಬಳಿ ಗಂಗಾ ಕಲ್ಯಾಣ ಯೋಜನೆ

2) ಹೊಸದುರ್ಗ ತಾಲ್ಲೂಕು ಹರೇನಹಳ್ಳಿ (ಬೆಲಗೂರು ಬಳಿ) ಗಂಗಾ ಕಲ್ಯಾಣ ಯೋಜನೆ

3) ಹೊಸದುರ್ಗ ತಾಲ್ಲೂಕು ವಳಲಿ ಬಳಿ ಗಂಗಾ ಕಲ್ಯಾಣ ಯೋಜನೆ

4) ಹೊಳಲ್‌ಕೆರೆ ತಾಲ್ಲೂಕು ಹಾಲೇನಹಳ್ಳಿ ಬಳಿ ಹೊಸಕೆರೆ ನಿರ್ಮಾಣ

5) ಹೊಳಲ್‌ಕೆರೆ ತಾಲ್ಲೂಕು ಗಂಡೇರಿಕಾವಲ್ ಬಳಿ ಗಂಗಾ ಕಲ್ಯಾಣ ಯೋಜನೆ

6) ಹೊಳಲ್‌ಕೆರೆ ತಾಲ್ಲೂಕು ಕಣಿವೇಜೋಗಿಹಳ್ಳಿ ಬಳಿ ಗಂಗಾ ಕಲ್ಯಾಣ ಯೋಜನೆ

7) ಹೊಳಲ್‌ಕೆರೆ ತಾಲ್ಲೂಕು ಕಸವನಹಳ್ಳಿ ಬಳಿ ಗಂಗಾ ಕಲ್ಯಾಣ ಯೋಜನೆ

8) ಹೊಳಲ್‌ಕೆರೆ ತಾಲ್ಲೂಕು ಹೊಳಲ್‌ಕೆರೆ ಹಿರೇಕಟ್ಟೆ ಪೋಷಕ್ ಕಾಲುವೆ ನಿರ್ಮಾಣ

9) ಮೊಳಕಾಲ್ಮೂರು ತಾಲ್ಲೂಕು ರಂಗಯ್ಯನದುರ್ಗ ಯೋಜನೆ

ಹಾಸನ ವಿಧಾನಸಭೆ ಕ್ಷೇತ್ರದ ತ್ಯಾಗಟೂರು ಗ್ರಾಮದ ಸ್ಥಳಾಂತರ

1002: ಶ್ರಿ ಕೆ.ಹೆಚ್. ಹನುಮೇಗೌಡ, (ಹಾಸನ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ವಿಧಾನಸಭಾ ಕ್ಷೇತ್ರದ ಕಟ್ಟಾಯ ಹೋಬಳಿ ತ್ಯಾಗಟೂರು ಗ್ರಾಮವನ್ನು ಸ್ಥಳಾಂತರಿಸಲು ಸರ್ಕಾರದ ಯಾವ ದಿನಾಂಕದಂದು ನಿರ್ಣಯ ತೆಗೆದುಕೊಂಡಿತು, ಈ ಗ್ರಾಮವನ್ನು ಸ್ಥಳಾಂತರಿಸಲು ಅವಾರ್ಡ್ ಯಾವ ದಿನಾಂಕದಂದು ಆಗಿದೆ.

ಆ) ಅವಾರ್ಡ್ ಅನುಸರಿಸಿ ಸಂಬಂಧಿಸಿದ ಆಲ್ಲಿಯ ಜನವರಿಗೆ ಇದುವರೆಗೆ ಅವಾರ್ಡ್ ಹಣವನ್ನು ಕೊಡದಿರಲು ಕಾರಣವೇನು; (ವಿವರ ನೀಡುವುದು);

ಇ) ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ನಾಯಕನಹಳ್ಳಿ ಮತ್ತು ಕಲ್ಲಹಳ್ಳಿ ಗ್ರಾಮಗಳನ್ನು ಅಲ್ಲಿನ ಈ ಗ್ರಾಮಗಳ ಜನರ ಆರೋಗ್ಯ ದೃಷ್ಟಿಯಿಂದ ಸ್ಥಳಾಂತರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಸರ್ಕಾರದ ಪರಿಶೀಲನೆಯಲ್ಲಿದೆ.

ನೆಲಮಂಗಲ ಕೊರಟಗೆರೆ ಲೋಕೋಪಯೋಗಿ ರಸ್ತೆಗಳು

1115: ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):– ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನೆಲಮಂಗಲ ಮತ್ತು ಕೊರಟಗೆರೆ ತಾಲ್ಲೂಕುಗಳಲ್ಲಿ ಒಟ್ಟು ಎಷ್ಟು ಕಿ.ಮೀ. ಲೋಕೋಪಯೋಗಿ ರಸ್ತೆಗಳಿವೆ; (ತಾಲ್ಲೂಕುವಾರು ವಿವರ ಕೊಡುವುದು);

ಆ) ಇವುಗಳ ಪೈಕಿ ಎಷ್ಟು ಕಿ.ಮೀ.ಗಳಲ್ಲಿ ಬಸ್ಸು ಸಂಚಾರ ಮಾಡಲು ಯೋಗ್ಯವಾಗಿದೆ;

ಇ) ಉಳಿದ ಕಿ.ಮೀ.ಗಳಲ್ಲಿ ಶೀಘ್ರದಲ್ಲಿ ರಸ್ತೆ ದುರಸ್ತಿ ಮಾಡಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ನೆಲಮಂಗಲ ಮತ್ತು ಕೊರಟಗೆರೆಯಲ್ಲಿರುವ ಲೋಕೋಪಯೋಗಿ ಇಲಾಖೆ ರಸ್ತೆ ವಿವರ ಕೆಳಕಂಡಂತಿದೆ:–

ತಾಲ್ಲೂಕು	ರಾಜ್ಯ ಹೆದ್ದಾರಿ	ಜಿಲ್ಲಾ ಮುಖ್ಯ ರಸ್ತೆ	ಒಟ್ಟು
ನೆಲಮಂಗಲ	30.00	104.00	134.00
ಕೊರಟಗೆರೆ	40.10	169.60	209.70
	70.10	273.60	343.70

ಆ) ಇವುಗಳಲ್ಲಿ 294.40 ಕಿಮೀ. ರಸ್ತೆಗಳು ಬಸ್ ಸಂಚಾರಕ್ಕೆ ಯೋಗ್ಯವಾಗಿವೆ.

ಇ) 1993–94ನೇ ಸಾಲಿನಲ್ಲಿ ಅನುದಾನ ಲಭ್ಯತೆಯನ್ನು ಅನುಸರಿಸಿ, ಉಳಿದ 49.30 ಕಿಮೀ. ರಸ್ತೆಯನ್ನು ಸಂಚಾರಕ್ಕೆ ತೊಂದರೆ ಉಂಟಾಗದಂತೆ ನಿರ್ವಹಿಸಲಾಗುವುದು.

ಮೂಡಬಿದರೆ ಏತ ನೀರಾವರಿ ಕುರಿತು

1172: ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಬಿದರೆ ಜಂಗರಗುಂಡಿ ಏತ ನೀರಾವರಿಯಿಂದ ನೀರಾವರಿಯಾಗುವ ಜಮೀನಿನ ವಿಸ್ತೀರ್ಣವೆಷ್ಟು; ಫಲಾನುಭವಿಗಳ ಸಂಖ್ಯೆ ಎಷ್ಟು;

ಆ) ಈ ಯೋಜನೆಗೆ ಪ್ಲಾನ್ ಮತ್ತು ಅಂದಾಜು ತಯಾರಿಸಲಾಗಿದೆಯೇ; ಹಾಗೂ ಯೋಜನಾ ವೆಚ್ಚವೆಷ್ಟು;

ಇ) ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು ಯಾವಾಗ;

ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿ ಬಗ್ಗೆ ಬಹಳ ಕಮ್ಮಿ ಹಣ ಖರ್ಚಾಗುವುದರಿಂದ ಈ ಯೋಜನೆಯನ್ನಾದರೂ ಸರ್ಕಾರವು ಬೇಗನೆ ಕಾರ್ಯಗತಗೊಳಿಸುವುದೆ ?

ಡಾ. ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) 64.37 ಹೆಕ್ಟೇರ್: ಫಲಾನುಭವಿಗಳ ಸಂಖ್ಯೆ: 68.

ಆ) ತಯಾರಿಸಲಾಗಿದೆ. ಅಂದಾಜು ವೆಚ್ಚ ರೂ.23.61 ಲಕ್ಷ.

ಇ) ಯೋಜನೆಯು ಆರ್ಥಿಕವಾಗಿ ಶಕ್ಯವಾಗಿಲ್ಲವಾದ ಕಾರಣ ಇದನ್ನು ಪುನಃ ಪರಿಶೀಲಿಸಲಾಗುತ್ತಿದೆ.